ನೊಂದವಳಿರಬೇಕು, ಬಾಯಿ ಬಿಟ್ಟು ಹೇಳಿರಲಿಕ್ಕಿಲ್ಲವಷ್ಟೆ, ಈಗ ಹೇಗೆ ಪ್ರಾಯ ಬಂದವಳಂತೆ ಚುರುಕಾಗಿದ್ದಾಳೆ, ಎಷ್ಟು ಬೇಗ ಮಗಳನ್ನ ತನ್ನೊಳಗೆ ಸೇರಿಸಿಕೊಂಡುಬಿಟ್ಟಿದ್ದಾಳೆ ಅನ್ನಿಸಿತು. ತಾವು ಗಂಡಸರು ಒಂದು ರೀತಿ ಅಹಂಕಾರಿಗಳು. 'ಒಳಗು' ಮಾಡಿಕೊಳ್ಳುವುದು ತಮಗೇ ಕಷ್ಟ. ತಮಗೆ ಭಾವನೆಗಳಿಗಿಂತ ವಿಚಾರಗಳೇ ಪ್ರಧಾನವಾಗುತ್ತವೆಯೇನೊ. 'ಅರ್ಜುನ ಅಹಂಕಾರ ಬಿಟ್ಟು ಕೃಷ್ಣನನ್ನ ತನ್ನೊಳಗೆ ಮಾಡಿಕೊಂಡ, ಕೌರವ ಅಹಂಕಾರಿಯಾಗಿದ್ದರಿಂದಲೆ ಅವನಿಗೆ ಕೃಷ್ಣನನ್ನ ತನ್ನೊಳಗೆ ಮಾಡಿಕೊಳ್ಳಲಿಕ್ಕಾಗಲಿಲ್ಲ' ಎಂದು ಕಳೆದ ವಾರ ಹರಿಕಥೆ ದಾಸರೊಬ್ಬರು ಹೇಳಿದ ಮಾತು ನೆನಪಾಯಿತು. ಅಪ್ಪ ಸುಮ್ಮನುಳಿದ ಎನ್ನಿಸಿಯೋ ಏನೋ, ರೋಹಿಣಿ ಮಾತಿಗೆಳೆದಳು – 'ಅಪ್ಪ, ನನ್ನ ಮದುವೆಯಾದ ಮೇಲೆ ಇವರ ಅದೃಷ್ಟ ಖುಲಾಯಿಸಿದೆಯಂತೆ. ಈಗಿವರು ಪಟ್ಟಣದಲ್ಲಿ ದೊಡ್ಡ ಎಲೆಕ್ಟ್ರಿಕ್ ಕಾಂಟ್ರಾಕ್ಟರ್. ನಾಲ್ಕಾರು ಜನ ಇವರ ಕೈಕೆಳಗೆ ಕೆಲಸ ಮಾಡ್ತಾರೆ. ದುಡಿಮೇನು ಬಹಳ ಚೆನ್ನಾಗಿದೆ.'

ಇನ್ನೂ ಗೊಂದಲ ಮುಕ್ತರಾಗದ ಭಟ್ಟರು 'ಆಗಲಮ್ಮ, ಸಂತೋಷ, ಚೆನ್ನಾಗಿರಿ' ಎಂದವರೆ ಕೈತೊಳೆಯಲು ಎದ್ದರು.

ಹೊರಬಂದ ಬಳಿಕ ಮತ್ತೆ ಬ್ಯಾಗ್ ತೆರೆದ ರೋಹಿಣಿ ಕಾಗದದ ಕಟ್ಟೊಂದನ್ನ ತೆಗೆದು 'ಅಪ್ಪ, ನಾನು ಕವಿತೆ ಬರೆಯೋದನ್ನು ಬಿಟ್ಟಿಲ್ಲ. ಒಂದಿಷ್ಟು ಬರ್ದಿದ್ದೇನೆ. ಆದರೆ ಅದನ್ನ ನೋಡಿ ಒಪ್ಪುತಪ್ಪು ಹೇಳೋರೆ ಯಾರೂ ಇಲ್ಲ. ಒಂದೆರಡು ಕವಿತೆಗಳು ಲೋಕಲ್ ಪೇಪರಲ್ಲಿ ಪ್ರಕಟವಾಗಿವೆ. ಇನ್ನೂ ಬಹಳ ಸುಧಾರಿಸಬೇಕೇನೊ ನಾನು. ಯಾವುದಕ್ಕೂ ನಿಮಗೊಂದು ಸಾರಿ ತೋರಿಸುವ ಅಂತ ತಂದಿದ್ದೇನೆ' ಎನ್ನುತ್ತ ಕೊಟ್ಟಳು. ಸುಮಾರು ಎಂಟ್ಹತ್ತು ಕವಿತೆಗಳಿರುವ ಹಾಗೆ ಕಂಡಿತು. ಸುಮ್ಮನೆ ಕಣ್ಣಾಡಿಸತೊಡಗಿದರು. ತಾಯ್ತನದ ಸಂದರ್ಭದಲ್ಲಿ ತವರಿನ ನೆನಪಲ್ಲಿ ತಾನುಂಡ ನೋವು ಸಂಕಟಗಳಿಗೆ ಶಬ್ದರೂಪ ಕೊಟ್ಟ ಕವಿತೆಗಳೆ ಹೆಚ್ಚು. ಓದುತ್ತಿದ್ದಂತೆ, ಛೆ, ನನ್ನ ಕೂಸು ತೀರಾ... ತೀರಾ ನೋವುಂಡಿರಬೇಕು ಎನ್ನಿಸಿತು.

ಇದ್ದಕ್ಕಿದ್ದಂತೆ 'ರೋಹಿಣಿ! ಯಾಕೆ ಬಂದೆ, ಯಾರು ನಿನಗೆ ಆಮಂತ್ರಣ ಕೊಟ್ಟವರು?' ಎನ್ನುವ ಗರ್ಜನೆಯ ದನಿ ಕೇಳಿಸಿ ತಟ್ಟನೆ ತಲೆಯೆತ್ತಿದರು. ಕಾರ್ತೀಕ ನಿಂತಿದ್ದ. ಒಂದು ಕ್ಷಣ ಯಾರಿಗೂ ಏನೂ ಮಾತಾಡಲು ತೋಚಲಿಲ್ಲ. ರೋಹಿಣಿಯೇ ಏನೋ ಹೇಳಬೇಕೆನ್ನುವಷ್ಟರಲ್ಲಿ ಗೀತಾ ಕಾರ್ತೀಕನ ರಟ್ಟೆ ಹಿಡಿದು ಒಳಗೆ ಎಳೆದುಕೊಂಡು ಹೋದದ್ದಷ್ಟನ್ನೆ ನೋಡಿದ ಭಟ್ಟರು ಸೋಫಾದ ಮೇಲೆ ಒಜ್ಜೆಯಾಗಿ ಕುಳಿತರು. ಮಗನ ವಿರೋಧ ನಿರೀಕ್ಷಿತವೇ ಆಗಿದ್ದರೂ ನೇರಾನೇರಾ ಹೀಗಾಗುತ್ತದೆ ಅಂದುಕೊಂಡಿರಲಿಲ್ಲ. ಒಳಗೆ ಕೋಣೆಯಲ್ಲಿ ಕಾರ್ತೀಕನ ಕೂಗಾಟ ಮುಂದುವರೆದಿತ್ತು. 'ಯಾವ ಮುಖ ಇಟ್ಟುಕೊಂಡು ಮತ್ತೆ ಬಂದಿದ್ದಾಳಂತೆ? ಇದು ಮತ್ತ್ಯಾವ ಹೊಸಹುನ್ನಾರ?... ಯಾಕೆ ಅವರಿಗೆ ಬಾಗಿಲು ತೆರೆದಿರಿ? ಹೊರಟು ಹೋಗಿ ಅನ್ನಬೇಕಿತ್ತು. ಅಪ್ಪ, ಅಣ್ಣ ಈಗಷ್ಟೆ ಸಮಾಜದಲ್ಲಿ ಸುಖವಾಗಿ, ಗೌರವಾನ್ವಿತರಾಗಿ ಬದುಕುತ್ತಿದ್ದಾರೆ, ಅದಕ್ಕೂ ಕಲ್ಲು ಹಾಕಬೇಕು ಅಂತ ಬಂದಿರಬೇಕು ಗಯ್ಯಾಳಿ... ಕೂಡಲೆ ಅವರಿಗೆ ತೊಲಗಲಿಕ್ಕೆ ಹೇಳು...' ಕಾರ್ತೀಕ ಕೂಗಾಡುವುದು ಹೊರಗಿನವರಿಗೂ ಕೇಳುತ್ತಿತ್ತು. ಗೀತಾಳ ಸಮಾಧಾನಿಸುವ ಮಾತುಗಳು ಮಾತ್ರ ಕೇಳದಷ್ಟು ಸಣ್ಣದಾಗಿದ್ದಿರಬೇಕು. ಅಂತೂ ನಿಧಾನವಾಗಿ ದನಿ ತಗ್ಗಿತು. 'ಹೊರಟು ಬಿಡೋಣ ರೋಹಿಣಿ' ರಫೀಕ ಹೇಳಿದ. ಭಟ್ಟರು ಮಗಳಿಗೆ ಹೇಳಿದರು 'ಈ ರಾತ್ರಿ ಬೇಡ, ಬೆಳಿಗ್ಗೆ ನೋಡುವ. ನಿನ್ನಣ್ಣನ ಸಿಟ್ಟು ನಿನಗೆ ಗೊತ್ತಲ್ಲಮ್ಮ. ನಾನು ನಿಧಾನವಾಗಿ ಮಾತಾಡುತ್ತೇನೆ. ನೀವೀಗ ಮೆತ್ತಿಗೆ ಹೋಗಿ ಮಲಗಿ' ಎಂದವರೆ ಅವರೊಟ್ಟಿಗೆ ಹಾಸಿಗೆ ಮಾಡಿಕೊಡಲು ಮೆತ್ತು ಹತ್ತಿದರು...

★★★